'ಡಾ: ನಂಜುಂಡಪ್ಪ ಸಮಿತಿಯು ಗುರುತಿಸಿರುವ ಹಿಂದುಳಿದ ಎಲ್ಲಾ 114 ತಾಲ್ಲೂಕುಗಳಲ್ಲಿ ನೂತನ ಪ್ರೌಢಶಾಲೆಗಳನ್ನು 2005–06ನೇ ಸಾಲಿನಲ್ಲಿ ತೆರೆಯಲು ಉದ್ದೇಶಿಸಿದ್ದೇನೆ'.

ಅದರಂತೆ 114 ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ.

ಕುಂದಾಪುರ ತಾಲ್ಲೂಕು ಹಿಂದುಳಿದ ತಾಲ್ಲೂಕುಗಳಲ್ಲಿ ಒಂದಾಗಿರುವುದಿಲ್ಲ.

02. ಕಡೆಗಣಿಸಿಲ್ಲ. 1994–95ರ ಈಚೆಗೆ ನಾಲ್ಕು ಪ್ರೌಢಶಾಲೆಗಳು ಕುಂದಾಪುರ ವಿಧಾನ ಸಭಾ ಕ್ಷೇತ್ರಕ್ಕೆ ಮಂಜೂರಾಗಿವೆ.

1) ಸರ್ಕಾರಿ ಪ್ರೌಢಶಾಲೆ, ವಕ್ರಾಡಿ
2) ಚೇಳೂರು
3) ಕಾಳಾವರ
4) ಹಾಲಾಡಿ

03. ಕ್ರಮ ಸಂಖ್ಯೆ: 01ಕ್ಕೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

5015 (5136) ಶ್ರೀ. ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕುಂದಾಪುರ ವಿಧಾನ ಸಭಾ ವ್ಯಾಪ್ತಿಯಲ್ಲಿನ ಸರ್ಕಾರಿ ಪ್ರೌಢಶಾಲೆಗಳಲ್ಲಿ ಎಷ್ಟು ಶಿಕ್ಷಕರ ಹುದ್ದೆಗಳು ತೆರವಾಗಿವೆ, ಮುಖ್ಯ ಶಿಕ್ಷಕರ ಹುದ್ದೆ ಸೇರಿ ಜಿಲ್ಲಾವಾರು ವಿವರ ನೀಡುವುದು.

ಆ) ಪ್ರೌಢಶಾಲಾ ಶಿಕ್ಷಕರ ಕೊರತೆಯಿಂದ ಪಾಠ ಪ್ರವಚನೆಗಳಿಗೆ ತೊಂದರೆಯಾಗಿರುವುದು ನಿಜವಲ್ಲವೇ?

ಇ) ತೆರವಾದ ಸಹ ಶಿಕ್ಷಕರ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಈ) ಸಹ ಶಿಕ್ಷಕರಿಂದ ಮುಖ್ಯೋಪಾಧ್ಯಾಯರ ಹುದ್ದೆಗೆ ಮುಂಬಡ್ತಿ ಮೂಲಕ ತುಂಬುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು : ಪೂರ್ಣ ವಿವರ ನೀಡುವುದು?

ಶ್ರೀ ಆರ್. ರಾಮಲಿಂಗಾರೆಡ್ಡಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. :

ಅ) ಕುಂದಾಪುರ ವಿಧಾನ ಸಭಾ ವ್ಯಾಪ್ತಿಯಲ್ಲಿನ ಒಟ್ಟು 09 ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಹಾಗೂ 38 ಸಹಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ವಿವರವಾರು ಮಾಹಿತಿ:– ಮುಖ್ಯ ಶಿಕ್ಷಕರು–09 : ಸಹ ಶಿಕ್ಷಕರು–19, ಕಲಾ–01, ಪಿಸಿಎಂ–02, ಆಂಗ್ಲ–01, ಹಿಂದಿ–02, ಕ್ರಾಪ್ಟ್–11, ದೈಹಿಕ ಶಿಕ್ಷಕರು–02. ಕುಂದಾಪುರ ವಿಧಾನ ಸಭಾ ಕ್ಷೇತ್ರವು ಉಡುಪಿ ಜಿಲ್ಲೆಯ ವ್ಯಾಪ್ತಿಗೊಳಪಟ್ಟಿದ್ದು, ಸದರಿ ಜಿಲ್ಲೆಯಲ್ಲಿ ಖಾಲಿ ಇರುವ ಪ್ರೌಢಶಾಲಾ ಮುಖ್ಯ ಶಿಕ್ಷಕರ ಹಾಗೂ ಸಹ ಶಿಕ್ಷಕರ ಖಾಲಿ ಹುದ್ದೆಗಳ ಮಾಹಿತಿ:– ಪ್ರೌಢಶಾಲಾ ಮುಖ್ಯ ಶಿಕ್ಷಕರು–49 : ಸಹಶಿಕ್ಷಕರು:– ಕಲಾ–09, ಪಿಸಿಎಂ–02, ಆಂಗ್ಲ–06, ಹಿಂದಿ–09, ಕ್ರಾಪ್ಟ್–69, ದೈಹಿಕ ಶಿಕ್ಷಕರು–03, ಸಿಬಿಜೆಡ್–04, ಕನ್ನಡ–03, ಒಟ್ಟು–154.

ಆ) ಶಿಕ್ಷಕರು ಇಲ್ಲದಿರುವ ಕೆಲವೊಂದು ಕಡೆ ಮಾತ್ರ ಈ ರೀತಿ ತೊಂದರೆ ಆಗುವ ಸಂಭವವಿದ್ದು, ಅಂತಹ ಸ್ಥಳಗಳಲ್ಲಿ ಪಕ್ಕದ ಶಾಲೆ ಹಾಗೂ ಹೆಚ್ಚಿನ ಶಿಕ್ಷಕರು ಇರುವ ಶಾಲೆಗಳಿಂದ ಶಿಕ್ಷಕರನ್ನು ತಾತ್ಕಾಲಿಕವಾಗಿ ನಿಯೋಜನೆ ಮಾಡಿ ವಿದ್ಯಾರ್ಥಿಗಳಿಗೆ ತೊಂದರೆ ಆಗದ ಹಾಗೆ ಕ್ರಮ ಕೈಗೊಳ್ಳಲಾಗಿದೆ.

ಇ) ನೇಮಕಾತಿ ಪ್ರಕ್ರಿಯೆ ನಡೆದಿದ್ದು 2005–06 ನೇ ಸಾಲಿನಲ್ಲಿ ಖಾಲಿ ಇರುವ ಸಹ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಈ) ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಗಳನ್ವಯ ಶೇಕಡ 50% ಮುಖ್ಯ ಶಿಕ್ಷಕರ ಹುದ್ದೆಗಳನ್ನು ಬಡ್ತಿ ಮೂಲಕ ಹಾಗೂ ಶೇಕಡ 50% ರಷ್ಟು ನೇರ ನೇಮಕಾತಿ ಮೂಲಕ ತುಂಬಲು ಅವಕಾಶವಿದೆ. ಬಡ್ತಿ ಕೋಟಾದಡಿಯಲ್ಲಿ ಲಭ್ಯವಿರುವ ಹುದ್ದೆಗಳನ್ನು ನಿಯಮ–32 ರಡಿಯಲ್ಲಿ ತುಂಬಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಅದರಂತೆಯೇ 96 ಅರ್ಹ ಗ್ರೇಡ್–1 ಪ್ರೌಢಶಾಲಾ ಸಹ ಶಿಕ್ಷಕರಿಗೆ ನಿಯಮ–32 ರಡಿಯಲ್ಲಿ ಸ್ಥಳ ನಿಯುಕ್ತಗೊಳಿಸಲಾಗುತ್ತಿದೆ. ಮುಂದುವರೆದು ಬಡ್ತಿ ಕೋಟಾದಲ್ಲಿ ಪ್ರಸ್ತುತ ಲಭ್ಯವಿರುವ 242 ಖಾಲಿ ಹುದ್ದೆಗಳನ್ನು ಸ್ಥಾನಪನ್ನ ಬಡ್ತಿ ಮೂಲಕ ತುಂಬಲು ಅಗತ್ಯವಿರುವ ಬಡ್ತಿ ಪ್ರಸ್ತಾವನೆಯನ್ನು ಅಧೀನ ಕಛೇರಿಗಳಿಂದ ಪಡೆಯಲಾಗುತ್ತಿದ್ದು, ಶೀಘ್ರದಲ್ಲಿಯೇ ಬಡ್ತಿ ನೀಡಲಾಗುವುದು. ಈ ಸ್ಥಳ ನಿಯುಕ್ತಿ ಪ್ರಕ್ರಿಯೆಯಲ್ಲಿ ಖಾಲಿ ಇರುವ ಉಡುಪಿ ಜಿಲ್ಲೆಯ ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

5016 (5995) ಶ್ರೀ. ಹಾಲಪ್ಪ ಹೆಚ್. (ಹೊಸನಗರ) :– ಮಾನ್ಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಗೆ ಕುಡಿಯುವ ನೀರು ಯೋಜನೆಗಾಗಿ ಬಿಡುಗಡೆ ಮಾಡಲಾದ ಹಣ ಎಷ್ಟು) ತಾಲ್ಲೂಕುವಾರು ವಿವರ ನೀಡುವುದು)

ಆ) ಇದರಲ್ಲಿ, ಕೈಪಂಪು, ತೆರೆದ ಬಾವಿ, ಚಿಲುಮೆಬಾವಿ, ಎನ್.ಆರ್.ಡಬ್ಲ್ಯೂ.ಎಸ್., ಎಂ.ಡಬ್ಲ್ಯೂ.ಎಸ್. ಗಾಗಿ ಬಿಡುಗಡೆ ಮಾಡಿದ ಹಣ ಎಷ್ಟು; (ವಿವರ ನೀಡುವುದು)

ಬಿ. ಸತ್ಯನಾರಾಯಣ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು. :

ಅ) ಶಿವಮೊಗ್ಗ ವ್ಯಾಪ್ತಿಯಲ್ಲಿ 7 ತಾಲ್ಲೂಕುಗಳಿದ್ದು, 2005–06ನೇ ಸಾಲಿನಲ್ಲಿ ನೀರು ಸರಬರಾಜು ಯೋಜನೆಯಡಿ ಜಿಲ್ಲೆಗೆ ಒಟ್ಟಾರೆ ಅನುದಾನ ರೂ.379.34 ಲಕ್ಷ (ಕೇಂದ್ರ + ರಾಜ್ಯ) ಬಿಡುಗಡೆ ಮಾಡಲಾಗಿದೆ.

ಆ) ಈ ಕಾಮಗಾರಿಗಳಿಗಾಗಿ ಎ.ಆರ್.ಡಬ್ಲ್ಯೂ.ಎಸ್.ಪಿ. (ರೂ. 255.34 ಲಕ್ಷ) ಮತ್ತು ಎನ್.ಆರ್. ಡಬ್ಲ್ಯೂ.ಎಸ್. ಪಿ. (ರೂ.124.0 ಲಕ್ಷ) ಅಡಿಯಲ್ಲಿ ಒಟ್ಟು ರೂ. 379.34 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

5017 (5996) ಶ್ರೀ. ಹಾಲಪ್ಪ ಹೆಚ್. (ಹೊಸನಗರ) :– ಮಾನ್ಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹೊಸನಗರ ತಾಲ್ಲೂಕಿನ ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯತ್ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ನಿಂದ ತೆಗೆದ ತೆರೆದ ಬಾವಿಗಳ ಸಂಖ್ಯೆ ಎಷ್ಟು;